# ಭಗವಂತನ ಪ್ರತ್ಯಕ್ಷ ಸಾನ್ನಿಧ್ಯದಲ್ಲಿ: ದಿವ್ಯದರ್ಶನ

ಮೂಲ : **ಸೋದರಿ ದೇವಮಾತಾ** ಕನ್ನಡಕ್ಕೆ : **ಡಾ. ಕೆ. ಎ. ನಾರಾಯಣನ್**

ಭಾಗ ೧



(ಅಮೆರಿಕಾ ದೇಶದವರಾದ ಸೋದರಿ ದೇವಮಾತೆಯವರು ಶ್ರೀ ರಾಮಕೃಷ್ಣ – ವಿವೇಕಾನಂದ ವೇದಾಂತ ಸಂಘಕ್ಕೆ ಸೇರಿದ ಸಂನ್ಯಾಸಿನಿಯಾಗಿದ್ದರು. ಅವರು ಕ್ಯಾಲಿಫೋರ್ನಿಯಾದ ಲಾಕ್ರೆಸಿಂಬಾದಲ್ಲಿ ಸ್ವಾಮಿ ಪರಮಾನಂದರು ಸ್ಥಾಪಿಸಿದ ಆನಂದಾಶ್ರಮಕ್ಕೆ ಸೇರಿದರು. ೧೯೦೮–೧೦ರಲ್ಲಿ ಭಾರತ ದೇಶಕ್ಕೆ ಭೇಟಿಕೊಟ್ಟು ತಮ್ಮ ಸಮಯದ ಬಹುಭಾಗವನ್ನು ಮದ್ರಾಸಿನಲ್ಲಿ ಕಳೆದರು. ಆಗ ಅವರು ಅಲ್ಲಿನ ಶ್ರೀ ರಾಮಕೃಷ್ಣಾಶ್ರಮದ ಸ್ಥಾಪಕ ಮತ್ತು ಅಧ್ಯಕ್ಷರಾಗಿದ್ದ ಸ್ವಾಮಿ ರಾಮಕೃಷ್ಣಾನಂದರೊಂದಿಗೆ ನಿಕಟವಾದ ಪರಿಚಯವನ್ನು ಹೊಂದಿದರು. ಇದರ ಪರಿಣಾಮವಾಗಿ ಅವರು 'ಭಾರತದ ಆಶ್ರಮದಲ್ಲಿ ಕಳೆದ ದಿನಗಳು' (Days in Indian Monastery) ಮತ್ತು 'ಶ್ರೀ ರಾಮಕೃಷ್ಣ ಮತ್ತು ಅವರ ಶಿಷ್ಯರುಗಳು' (Sri Ramakrishna and His Disciples) ಎಂಬ ಎಂದಿಗೂ ಮರೆಯಲಾಗದ ಎರಡು ಉತ್ಕೃಷ್ಟ ಪುಸ್ತಕಗಳನ್ನು ಬರೆದರು. ಇದರಲ್ಲಿ ಅವರು ಹಿಂದೂ ದೇಶದ ಜನಜೀವನ ಮತ್ತು ಸಂಸ್ಕೃತಿಯ ಬಹು ಸುಂದರ ಚಿತ್ರವನ್ನು ಕೊಟ್ಟಿದ್ದಾರೆ. ಅಷ್ಟೇ ಅಲ್ಲದೆ ಅವುಗಳಲ್ಲಿ ಶ್ರೀರಾಮಕೃಷ್ಣ ಮಹಾಸಂಘದ ಮೊದಲ ದಿನಗಳ – ಅದರಲ್ಲೂ ಮುಖ್ಯವಾಗಿ ದಕ್ಷಿಣ ಹಿಂದೂಸ್ಥಾನದಲ್ಲಿ ಅದರ ಬೆಳವಣಿಗೆಗೆ ಸಂಬಂಧಿಸಿದ ಅಮೂಲ್ಯವಾದ ವಿವರಗಳನ್ನು ತಿಳಿಸಿದ್ದಾರೆ. ಆಧ್ಯಾತ್ಮಿಕ ತತ್ವಗಳ ಗ್ರಹಣ ಶಕ್ತಿಯಲ್ಲಿ ಪ್ರಖ್ಯಾತರಾದ ಮತ್ತು ಉತ್ಕೃಷ್ಟ ಸಾಹಿತ್ಯ ರಚನೆಯಲ್ಲಿ ಹೆಸರಾದ ಸೋದರಿ ದೇವಮಾತೆಯವರು ಶ್ರೀರಾಮಕೃಷ್ಣ ಆಶ್ರಮದಿಂದ ಪ್ರಕಟವಾಗುತ್ತಿರುವ ಮಾಸಪತ್ರಿಕೆ 'ವೇದಾಂತ ಕೇಸರಿ'ಯಲ್ಲಿ ಆಗಾಗ ಅನೇಕ ಲೇಖನಗಳನ್ನು ಬರೆದಿರುತ್ತಾರೆ.

ಈಗ ಪ್ರಕಟವಾಗುತ್ತಿರುವ ಈ ಲೇಖನದ ಆಂಗ್ಲ ಮೂಲವು ೧೯೩೬ ಫೆಬ್ರವರಿ ಮಾರ್ಚ್‌ನಲ್ಲಿ , ಪುನಃ ಮಾರ್ಚ್ ೧೯೭೮ರಲ್ಲೂ ವೇದಾಂತ ಕೇಸರಿಯಲ್ಲಿ ಪ್ರಕಟವಾಗಿದೆ. ೧೯೩೬ರ ಶ್ರೀರಾಮಕೃಷ್ಣರ ಶತಮಾನೋತ್ಸವದ ಸಂದರ್ಭ ಬರೆದ ಈ ಲೇಖನದಲ್ಲಿ ಸೋದರಿ ದೇವಮಾತೆಯವರು ತಮ್ಮ ಅತ್ಯಂತ ಆತ್ಮೀಯವಾದ ಮತ್ತು ಪವಿತ್ರವಾದ ಆಧ್ಯಾತ್ಮಿಕ ಅನುಭವಗಳನ್ನು ಅಂತರಾತ್ಮನ ಪ್ರೇರಣೆಯಿಂದ ಮೊದಲ ಬಾರಿಗೆ ಬಹಿರಂಗಪಡಿಸಿದ್ದಾರೆ. ಅತ್ಯಂತ ಸರಳ ಹೃದಯಂಗಮ ಮತ್ತು ಯಥಾರ್ಥ ಆಗಿರುವ ಈ ಲೇಖನವನ್ನು ಓದುವವರಿಗೆ ದಕ್ಷಿಣೇಶ್ವರದ ಈ ಮಹಾಪುರುಷ ಚರಿತ್ರೆಯಲ್ಲಿ ಮಾತ್ರ ಬಣ್ಣಿಸಲ್ಪಟ್ಟವರಲ್ಲ – ಬದಲಾಗಿ ಅವರ ಪ್ರತ್ಯಕ್ಷ ದರ್ಶನದ ಸೌಭಾಗ್ಯವನ್ನು ಪಡೆಯಲು ತವಕಿಸುವ ಭಕ್ತರಿಗೆ ತಮ್ಮ ಸಾನ್ನಿಧ್ಯದ ಪ್ರತ್ಯಕ್ಷ ಅನುಭವವನ್ನು ದಯಪಾಲಿಸುವ ದಯಾಮಯ ಎಂಬುದು ಸ್ಫುಟವಾಗುತ್ತದೆ. ಶ್ರೀ ರಾಮಕೃಷ್ಣರು 'ನಿನಗೆ ನಿಜವಾಗಿ ಭಗವಂತನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂಬ ವ್ಯಾಕುಲತೆ ಇದ್ದರೆ ನೀನು ಅವನನ್ನು ಎಲ್ಲರಿಗಿಂತಲೂ ಹೆಚ್ಚು ನಿಜವಾಗಿ ನೋಡಬಹುದು ಮತ್ತು ಆತನೊಡನೆ ಸಂಭಾಷಣೆಯನ್ನೂ ಮಾಡಬಹುದು' ಎಂದು ನರೇಂದ್ರನಿಗೆ ತಿಳಿಸಿದ್ದರು. ಈ ಲೇಖನದಲ್ಲೂ ಸೋದರಿ ದೇವಮಾತೆಯವರು ಶ್ರದ್ಧೆ ಮತ್ತು ನಂಬಿಕೆಗಳು ಸಡಿಲವಾಗಿರುವ ನಮ್ಮಂತಹ ಸಾಮಾನ್ಯರಿಗೂ ಸಹ ನಿಜವಾಗಿ ನಮ್ಮ ಅಂತರಂಗದಲ್ಲಿ ಪಾವಿತ್ರ್ಯ ಮತ್ತು ದೈನ್ಯ ಇದ್ದ ಪಕ್ಷದಲ್ಲಿ ಪರಮಾತ್ಮನ ಅವತಾರಾದಿಗಳನ್ನು ಪ್ರತ್ಯಕ್ಷವಾಗಿ ಕಾಣಬಹುದು ಮತ್ತು ಅವರೊಡನೆ ಮಾತನ್ನೂ ಆಡಬಹುದು ಎಂಬ ತಮ್ಮ ಸ್ವಂತ ಅನುಭವವನ್ನು ಜಗತ್ತಿಗೆ ತಿಳಿಸಿದ್ದಾರೆ).

**ಈ ಲೇಖನಮಾಲೆ ಮೂಲತಃ ೧೯೮೨ರಲ್ಲಿ 'ಉದಯವಾಣಿ' ಪತ್ರಿಕೆಯ ಸಾಪ್ತಾಹಿಕ ಪುರವಣಿಯಲ್ಲಿ ೫ ಕಂತುಗಳಲ್ಲಿ ಪ್ರಕಟವಾಗಿತ್ತು. ಇದನ್ನು ಮರು ಮುದ್ರಿಸಲು ಅನುಮತಿ ನೀಡಿದ 'ಉದಯವಾಣಿ' ಪತ್ರಿಕೆಗೂ, ಅನುವಾದಕರಿಗೂ ನಮ್ಮ ಕೃತಜ್ಞತೆಗಳು.** *(–ಸಂ.)*

## ಭಗವಂತನ ಪ್ರತ್ಯಕ್ಷ ಸಾನ್ನಿಧ್ಯದಲ್ಲಿ

**ಹೊ**ತ್ತು ಮುಳುಗುವ ಸಮಯ ಸಮೀಪಿಸುತ್ತಿದೆ. ಜೀವನ ಸಂಧ್ಯೆಯ ಪ್ರಶಾಂತಿ ನನ್ನಂತರಂಗವನ್ನು ವ್ಯಾಪಿಸಿದೆ. ನೆರಳು ನನ್ನ ಬಳಿಯಲ್ಲಿ ಸುಳಿದಾಡುತ್ತಿದೆ. ಶ್ರೀ ರಾಮಕೃಷ್ಣ ಮಹಾಸಂಘದ ಸದಸ್ಯೆಯಾಗಿ ಮೂವತ್ತು ವರ್ಷಗಳಿಗಿಂತಲೂ ಹೆಚ್ಚು ಕಾಲ ಶ್ರದ್ಧೆ ಮತ್ತು ಭಕ್ತಿಗಳಿಂದ ಸಲ್ಲಿಸಿದ ಸೇವೆಯ ಹಿನ್ನೆಲೆಯಲ್ಲಿ ನಾನು ಜೀವಿತದ ಸಂಪೂರ್ಣ ಪರಿಶೀಲನೆಯನ್ನು ಕೈಗೊಂಡಿದ್ದೇನೆ. ಈಗ ನಾನು ಬರೆಯುತ್ತಿರುವ ಅನುಭವಗಳನ್ನು ಎಂದಿಗೂ ತಿಳಿಸದೆ ಸುಮ್ಮನಿದ್ದುಬಿಡಬೇಕೆಂದು ಆಲೋಚಿಸಿದ್ದೆ. ಕೇವಲ ನನ್ನೊಬ್ಬಳಿಗೆ ಸಂಬಂಧಿಸಿದ ಅತ್ಯಂತ ಪವಿತ್ರವಾದ ಈ ಸ್ವಾನುಭವಗಳನ್ನು ಬರವಣಿಗೆಯ ಮೂಲಕ ಪ್ರಕಟಿಸಲು ನಾನು ಬಹಳ ಹಿಂಜರಿಯುತ್ತಿದ್ದೇನೆ; ನಾನು ಇವುಗಳನ್ನು ಒಬ್ಬರಿಗೆ ಮಾತ್ರವೇ ತಿಳಿಸಿರುವೆ; ಬೇರಾರಿಗೂ ಇಲ್ಲ. ಆದರೆ ಪ್ರಪಂಚದ ಮಹಾಪುರುಷರಿಗೆ ಸಂಬಂಧಪಟ್ಟ ವಿಷಯಗಳನ್ನು ರಹಸ್ಯವಾಗಿ

ಯೇ ಇಡಲು ಸಾಧ್ಯವಾಗುವುದಿಲ್ಲ , ಏಕೆಂದರೆ ಅದು ಎಲ್ಲರ ಸ್ವತ್ತು; ಒಬ್ಬರಿಗೇ ಸೇರಿದ್ದಲ್ಲ.

ಕೆಲವು ಕಾಲದ ಹಿಂದೆ ದೊರಕಿದ ಸಂತ ಪಾಲ (St Paul)ರಿಗೆ ಸಂಬಂಧಪಟ್ಟ ಪತ್ರವೊಂದು ಇಲ್ಲಿ ನನ್ನ ನೆನಪಿಗೆ ಬರುತ್ತಿದೆ, ಅದು ಅಜ್ಞಾತಳಾದ ಏಸುಕ್ರಿಸ್ತನ ಅನುಯಾಯಿ ಒಬ್ಬಳು ಅಪರಿಚಿತಳಾದ ಇನ್ನೊಬ್ಬಳಿಗೆ ಬರೆದಿದ್ದ ಕಾಗದ. ಆಕೆ ಅದರಲ್ಲಿ ತಾನು ನಝರೀನದ ಬೋಧಕನಾದ ಸಂತ ಪಾಲನಿಗೋಸ್ಕರ ನಗರದ ಬಾಗಿಲಲ್ಲಿ ಹೇಗೆ ದಿನವಿಡೀ ಕಾತರಳಾಗಿ ಕಾಯುತ್ತಿದ್ದಳೆಂಬುದನ್ನು ವಿವರಿಸಿದ್ದಳು. ಅವಳೆಣಿಕೆಯಲ್ಲಿ ಆತನೊಬ್ಬ ಮಹೋನ್ನತ ವ್ಯಕ್ತಿ, ಅವನು ಒಂದು ಭವ್ಯವಾದ ಕುದುರೆಯ ಮೇಲೆ ಕುಳಿತು ಮಹಾ ವೈಭವದಿಂದ ನಗರ ಪ್ರವೇಶವನ್ನು ಮಾಡುತ್ತಾನೆ ಎಂಬುದಾಗಿ ಭಾವಿಸಿದ್ದಳು. ಆದರೆ ಆಕೆ ಆ ಮೆರವಣಿಗೆಯಲ್ಲಿ ಪ್ರತ್ಯಕ್ಷವಾಗಿ ಕಂಡಿದ್ದು ಕೃಶವಾದ ದೇಹದ, ಬಾಗಿದ ಕಾಲುಗಳ, ಗರುಡ ಮೂಗಿನ ಮತ್ತು ಮೆಳ್ಳೆಗಣ್ಣಿನ ಅತಿ ಸಾಮಾನ್ಯ ವ್ಯಕ್ತಿಯೊಬ್ಬನನ್ನು. ಇವನೇ ಸಂತ ಪಾಲ! ಆಗ ಅವಳಿಗಾದ ನಿರಾಶೆ ಎಷ್ಟಿರಬಹುದು?

ಈ ಕಾಗದ ಬರೆದಾಕೆಯ ವೃತ್ತಾಂತವೇನೂ ತಿಳಿಯದೆ, ಕಾಲ ಗರ್ಭದಲ್ಲಿ ಹುದುಗಿ ಹೋಗಿದೆ. ಆದರೆ ಆಕೆ ತಿಳಿಸಿರುವ ಕ್ರಿಸ್ತನ ಆ ಪ್ರಖ್ಯಾತ ಶಿಷ್ಯನ ಚಿತ್ರ ಅಚ್ಚಳಿಯದ ಹಾಗೆಯೇ ಇಂದಿಗೂ ಉಳಿದಿದೆ. ಅದೇ ರೀತಿ ಇಲ್ಲಿಯೂ ಸಹ ಯಾರಿಗೆ ಈ ದಿವ್ಯ ದರ್ಶನಗಳ ಮೂಲಕ ಭಗವಂತನ ಅಸೀಮ ಕರುಣೆ, ಅನಂತ ಮಹಿಮೆ ಮತ್ತು ಅಪಾರ ಅನುಗ್ರಹ ಶಕ್ತಿ ಇವುಗಳನ್ನೆಲ್ಲಾ ಅರಿಯಲು ಸಾಧ್ಯವಾಯಿತೋ ಆ ಮಹಾಪುರುಷನ ಜ್ವಲಂತ ಚಿತ್ರ ಮಾತ್ರವೇ ಅಚ್ಚಳಿಯದೆ ಉಳಿದು ಇದನ್ನು ತಿಳಿಸಿದವಳ ನೆನಪೂ ಸಹ ಸಂಪೂರ್ಣವಾಗಿ ಮರೆತುಹೋಗಲೆಂದು ಆಶಿಸುತ್ತೇನೆ.

ನಾನು ಕೈಗೊಂಡಿರುವ ಈ ಕೆಲಸ ಕೇವಲ ನನ್ನ ಸ್ವ-ಇಚ್ಛೆಯಿಂದಲ್ಲ. ನನಗೆ ಅಂತರಂಗವಾಗಿ ಮತ್ತು ಬಹಿರಂಗವಾಗಿ ಸತತವೂ ಆಗುತ್ತಿರುವ ಪ್ರೇರಣೆಗಳೇ ಈ ಕೆಲಸದಲ್ಲಿ ತೊಡಗುವಂತೆ ನನ್ನನ್ನು ಬಲಾತ್ಕರಿಸುತ್ತಿವೆ. ಶ್ರೀರಾಮಕೃಷ್ಣ ಮಹಾಸಂಘದ ಅಧ್ಯಕ್ಷರಾಗಿ ಅನೇಕ ವರ್ಷಗಳ ಕಾಲ ಸೇವೆ ಸಲ್ಲಿಸಿದ ಸ್ವಾಮಿ ಶಿವಾನಂದರ ಈ ಕೆಳಗಿನ ಪತ್ರವೂ ಸಹ ಇದನ್ನು ಸ್ಪಷ್ಟವಾಗಿ ಒತ್ತಿ ಹೇಳುತ್ತಿದೆ.

ಅದು ಹೀಗಿದೆ :

ಒಲವಿನ ಸೋದರಿ ದೇವಮಾತೆ,

ನೀನು ಸಂಘದ ಪವಿತ್ರ ಕಾರ್ಯವನ್ನು ಪ್ರವೇಶಿಸಿದ ಮೂವತ್ತನೆಯ ವಾರ್ಷಿಕೋತ್ಸವದ ದಿನವಾದ ೨೦ನೆಯ ತಾರೀಕಿನಂದು ಬರೆದ ಪತ್ರ ಬಂದು ತಲುಪಿತು. ಆ ಕಾಗದದಲ್ಲಿ ನೀನು ಇನ್ನೂ ಕೈಗೊಳ್ಳಬೇಕಾಗಿರುವ ಅನೇಕ ಕೆಲಸಗಳ ಕುರಿತು ಪ್ರಸ್ತಾಪಿಸಿದ್ದೀಯೆ. ಈ ಎಲ್ಲಾ ಕೆಲಸಗಳನ್ನು ನಿಸ್ವಾರ್ಥವಾಗಿ ಮಾಡಲು ನೀನು ಅತ್ಯಂತ ಉತ್ಸಾಹಶಾಲಿ ಆಗಿರುವೆ ಎಂದು ತಿಳಿದು ನನಗೆ ಅತ್ಯಾನಂದವಾಗಿದೆ. ನಿನ್ನ ದೇಹಪ್ರಕೃತಿ ಬಹು ಸೂಕ್ಷ್ಮವಾಗಿದ್ದರೂ ಸಹ ನಿನ್ನ ಅಂತರಂಗದ ಪ್ರೇರಣೆ ದಿನೇ ದಿನೇ ವೃದ್ಧಿಯಾಗುತ್ತಿರುವ ದೃಢ ನಿರ್ಧಾರದಿಂದ ಕೂಡಿದ ನೀನು, ಈ ಕೆಲಸಗಳಲ್ಲಿ ಎಂತಹ ಮಹತ್ವವಾದ ಪಾತ್ರವನ್ನು ವಹಿಸಿದ್ದೀ ಮತ್ತು ಇನ್ನೂ ವಹಿಸುತ್ತೀ ಎಂಬುದನ್ನು ನಾನು ಬಲ್ಲೆ. ಈ ಪವಿತ್ರವಾದ ಕೆಲಸದೊಡನೆ ನಿನ್ನ ಸಂಬಂಧ ಕೇವಲ ಕಳೆದ ಮೂವತ್ತು ವರ್ಷಗಳು ಮಾತ್ರವೇನಲ್ಲ; ನಿನ್ನ ಸಂಪೂರ್ಣ ಅಸ್ತಿತ್ವವೇ ಇದರೊಡನಿದೆ ಎಂದು ನಾನು ಎಣಿಸುತ್ತೇನೆ. ಏಕೆಂದರೆ ಒಂದು ಪವಿತ್ರ ಕಾರ್ಯದ ಮುಂದಾಳುಗಳು ಆ ಕಾರ್ಯದೊಡನೆಯೇ ಜನ್ಮತಾಳುತ್ತಾರಲ್ಲದೆ ಪ್ರತ್ಯೇಕವಾಗಿ ಬರುವುದಿಲ್ಲ. ಅವರು ಬರುವುದಕ್ಕೆ ಮೊದಲೇ ರಂಗಭೂಮಿ ಸಿದ್ಧವಾಗಿರುತ್ತದೆ; ಅದರ ಪರದೆ ಮೇಲಕ್ಕೆ ಸರಿಯುತ್ತಲೇ ವಿಶ್ವದ ನಾನಾ ಭಾಗಗಳಿಂದ ನಾಟಕದ ವಿವಿಧ ಪಾತ್ರಧಾರಿಗಳು ಒಬ್ಬೊಬ್ಬರಾಗಿ ತೋರಿಕೊಂಡು ತಮ್ಮ ತಮ್ಮ ನಿಯೋಜಿತ ಪಾತ್ರಗಳನ್ನು ನಿರ್ವಹಿಸುತ್ತಾರೆ. ನೀನು ಅಂತಹ ಪಾತ್ರಗಳಲ್ಲಿ ಒಬ್ಬಳು. ಅಂತಹ ವ್ಯಕ್ತಿಗಳ ವೈಶಿಷ್ಟ್ಯವೇನೆಂದರೆ ಅವರ ಅಂತರಂಗ ಅವರಿಗೆ ಆ ಕಾರ್ಯದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸುತ್ತದೆ ಮತ್ತು ಅವರು ಆ ಕೆಲಸಗಳಲ್ಲಿ ದೃಢನಿಷ್ಠೆಯಿಂದ ಭಾಗವಹಿಸಿ ಅದರ ಕಷ್ಟನಷ್ಟಗಳೆಲ್ಲವನ್ನೂ ಸ್ವ-ಸಂತೋಷದಿಂದಲೇ ಸ್ವೀಕರಿಸುವರು. ಆದ್ದರಿಂದ ಸ್ವಾಮಿ ಪರಮಾನಂದರ ಕೆಲಸದೊಡನ ನಿನ್ನ ನಿಕಟವಾದ ಸಂಬಂಧ ಭಗವಾನ್ ಶ್ರೀರಾಮಕೃಷ್ಣರ ಸಂಕಲ್ಪಾನುಸಾರವಾಗಿ ಆಗಿದೆ ಎಂದು ನನ್ನ ದೃಢ ವಿಶ್ವಾಸ. ನೀನು ಧನ್ಯೆ ! ಈ ಪ್ರಪಂಚದಲ್ಲಿ ಶ್ರೀರಾಮಕೃಷ್ಣರ ಹೆಸರು ಎಷ್ಟು ಕಾಲ ಗೌರವಿಸಲ್ಪಡುತ್ತದೋ ಅಷ್ಟು ಕಾಲ ನಿನ್ನ ಹೆಸರೂ ಉಳಿದುಕೊಂಡಿರುತ್ತದೆ.''

ಭಗವಂತನು ಪ್ರತ್ಯಕ್ಷನಾಗಿ ಕಾಣಿಸಿಕೊಳ್ಳುತ್ತಾನೆ ಮತ್ತು ಅವನ ಪ್ರತ್ಯಕ್ಷ ಸಾನ್ನಿಧ್ಯದ ಅನುಭವ ಸತ್ಯ ಎಂಬುದನ್ನು ತಿಳಿಸಿ ಹೇಳುವ ಮಹಾನುಭಾವರು ನಡೆದ ಘಟನೆಗಳನ್ನು ನಡೆದಂತೆಯೇ ಸರಳವಾಗಿ ಚಿತ್ರಿಸಿದರಲ್ಲದೆ ಅವರು ಬರಿಯ ಸಾಹಿತ್ಯ ನಿರ್ಮಾಪಕರಲ್ಲ. ಅವರ ಕರ್ತವ್ಯ ಭಗವಂತನು ಮಾನವರ ಹೃದಯ ಮಂದಿರದಲ್ಲಿ ಸ್ಥಿರವಾಗಿ ನೆಲೆಸುವಂತೆ ಮಾಡುವ ಪರಂಪರಾನುಗತವಾದ ಸಂಪ್ರದಾಯವನ್ನು ಸಂರಕ್ಷಿಸುವುದೇ ಆಗಿದೆ. ನಾನೂ ಈ ಅನುಭವಗಳನ್ನು ತಿಳಿಸುತ್ತಿರುವುದು ಇದೇ ಉದ್ದೇಶದಿಂದ. ಇವುಗಳು ಕೇವಲ ನನ್ನ ಮನಸ್ಸಿನ ಭ್ರಾಂತಿಗಳಲ್ಲ ; ಬುದ್ಧಿ ವಿಕಲ್ಪದ ಬರಿಯ ಕಲ್ಪನೆಗಳೂ ಅಲ್ಲ ; ಕನಸುಗಳೂ ಅಲ್ಲ. ನನಗೆ ಪ್ರತ್ಯಕ್ಷ ದರ್ಶನದ ಮಹಾ ಸೌಭಾಗ್ಯವನ್ನು ಕರುಣಿಸಿದ ಆ ವ್ಯಕ್ತಿ ಭೂತ-ಪ್ರೇತ ಪಿಶಾಚಿ – ಯಾವುದೊಂದೂ ಅಲ್ಲ ; ಬದಲಾಗಿ ಅವರು ಚೈತನ್ಯದಿಂದ ಮಿಡಿಯುತ್ತಿದ್ದವರು; ಅವರ ಶರೀರದ ಉಷ್ಣತೆ ಮತ್ತು ಸಾನ್ನಿಧ್ಯದ ಉಜ್ವಲ ಕಾಂತಿ ಸ್ಪಷ್ಟವಾಗಿ ನನ್ನ ಅನು

ಭವಕ್ಕೆ ವೇದ್ಯವಾಗುತ್ತಿದ್ದವು. ಅಷ್ಟೇ ಅಲ್ಲ; ಅಂತಹ ದರ್ಶನಗಳು ಸಂಭವಿಸಿದಾಗಲೆಲ್ಲಾ ಒಂದು ವಿಶಿಷ್ಟವಾದ ತೇಜಸ್ಸು ನನ್ನ ಶರೀರ ದಾದ್ಯಂತವೂ ವ್ಯಾಪಿಸಿಕೊಂಡಿರುತ್ತಿತ್ತು. ಒಂದು ದಿವ್ಯವಾದ ಕಾಂತಿ ನನ್ನಂತರಂಗವನ್ನು ಹೊಕ್ಕು ನನ್ನ ಮನಸ್ಸು ಮತ್ತು ಬುದ್ಧಿಯನ್ನು ಬೆಳಗುತ್ತಿರುವಂತೆ ನನಗೆ ಅನುಭವವಾಗುತ್ತಿತ್ತು. ಕೆಲವು ವೇಳೆ ದರ್ಶನಗಳ ಆಗಮನವನ್ನು ಸೂಚಿಸಲೆಂಬಂತೆ ಈ ದರ್ಶನಗಳ ಮೊದಲಲ್ಲಿ ಕಾಣಿಸಿಕೊಳ್ಳುತ್ತಿತ್ತು; ಕೆಲವು ವೇಳೆ ಇದು ಈ ದರ್ಶನಗಳೊಂದಿಗೆ ಕಾಣಿಸುತ್ತಿತ್ತು ಮತ್ತು ಇದರ ಪ್ರಭಾವ ಕೆಲವು ಗಂಟೆಗಳು ಅಥವಾ ಕೆಲವು ದಿನಗಳು ಎಡೆಬಿಡದೆ ನನ್ನನ್ನು ಸದಾ ಆವರಿಸಿಕೊಂಡೇ ಇರುತ್ತಿತ್ತು.

ಭರತಖಂಡದ ಪ್ರಾಚೀನಕಾಲದ ಋಷಿಗಳೂ, ಮಧ್ಯಮ ಯುಗದ ಯುರೋಪಿನ ಸಂತರೂ ಅಥವಾ ಭಗವಂತನ ಪ್ರತ್ಯಕ್ಷ ದರ್ಶನದ ಸೌಭಾಗ್ಯವನ್ನು ಪಡೆದ ಮಹಾತ್ಮರೆಲ್ಲರೂ ತಮ್ಮ ತಮ್ಮ ಅನುಭವಗಳನ್ನು ತಮ್ಮ ಹೃದಯದಲ್ಲೇ ರಹಸ್ಯವಾಗಿ ಉಳಿಸಿ ಕೊಂಡಿದ್ದ ಪಕ್ಷದಲ್ಲಿ ಈ ಪ್ರಪಂಚ, ನಾವು ಊಹಿಸಲಾಗದಷ್ಟು ಅಧೋಗತಿಗೆ ಇಳಿದು ಬಿಡುತ್ತಿತ್ತು. ಅಷ್ಟೇ ಅಲ್ಲ ; ಸಾಮಾನ್ಯ ಭಕ್ತರ ಅನುಭವಗಳೂ ಸಹ ಇತರರ ಶ್ರದ್ಧೆಯನ್ನು ವೃದ್ಧಿಪಡಿಸು ವುದಕ್ಕೆ ಮತ್ತು ಅವರು ಉತ್ಸಾಹದಿಂದ ಭಗವಂತನ ಅನ್ವೇಷಣೆ ಯಲ್ಲಿ ಮುಂದುವರಿಯುವುದಕ್ಕೆ ನೀಡುವ ಸಹಾಯ ಅತ್ಯಂತ ಅಮೂಲ್ಯವಾಗಿದೆ.

ಆದ ಕಾರಣ ಮಾನವಕೋಟಿಯನ್ನು ಉದ್ಧರಿಸಲು ಈ ಭೂಮಿಯಲ್ಲಿ ಅವತಾರವೆತ್ತಿದ ಮಹಾಮಹಿಮರಲ್ಲಿ ಅತ್ಯಂತ ಶ್ರೇಷ್ಠನಾದವನ ದಿವ್ಯ ವೈಭವಗಳನ್ನೂ, ಅವನ ಅಪಾರ ಕರು ಣೆಯ ಗಹನವಾದ ಅನುಭವಗಳನ್ನೂ ಇತರರೂ ಹೊಂದಲು ಸಾಧ್ಯವಾಗಬಹುದು ಎಂಬ ಆಸೆಯಿಂದ ಅನೇಕ ವರ್ಷಗಳಿಂದ ನನ್ನ ಅಂತರಂಗದಲ್ಲಿ ರಹಸ್ಯವಾಗಿ ಕಾಪಾಡಿಕೊಂಡು ಬಂದಿದ್ದ ಆಧ್ಯಾತ್ಮಿಕ ಅನುಭವಗಳನ್ನು ನನ್ನ ಜೀವನದ ಈ ಸಂಧ್ಯಾಕಾಲ ದಲ್ಲಿ ಎಲ್ಲರೊಡನೆ ಹಂಚಿಕೊಳ್ಳಲು ನಿರ್ಧರಿಸಿದ್ದೇನೆ.

ಮಹಾಮಾತೆ ಶ್ರೀಶಾರದಾದೇವಿಯವರು ಶ್ರೀರಾಮಕೃಷ್ಣರ ಮಹಾಸಮಾಧಿಯಾದ ನಂತರವೂ ಬಹಳ ಕಾಲ ಜೀವಿಸಿದ್ದರು. ಶ್ರೀರಾಮಕೃಷ್ಣರ ಮಹಾಸಮಾಧಿ ಆದ ನಂತರ ಅವರು ತಮ್ಮ ಸೌಮಾಂಗಲ್ಯದ ಚಿಹ್ನೆಗಳಾದ ಅಂಚಿನ ಸೀರೆಯನ್ನೂ ಮತ್ತು ಆಭರಣಗಳನ್ನೂ ಕಳಚಿ ಹಾಕಿ ವೈಧವ್ಯ ಸೂಚಕವಾದ ಅಂಚಿಲ್ಲದ ಸೀರೆಯನ್ನು ಉಡಲು ತೊಡಗಿದಾಗ ಶ್ರೀರಾಮಕೃಷ್ಣರು ಅವರಿಗೆ ಪ್ರತ್ಯಕ್ಷರಾಗಿ, ''ನೀನು ಏನು ಮಾಡುತ್ತಿರುವೆ? ನಾನು ಬದುಕಿಲ್ಲ ಎಂದು ನೀನು ಭಾವಿಸುತ್ತಿದ್ದೀಯೇನು?'' ಎಂದು ಆಕ್ಷೇಪಿಸಿ ದರು. ಆಗ ಶ್ರೀಶಾರದಾದೇವಿಯವರು ಮರುಮಾತಾಡದೆ ತಮ್ಮ ಬಳೆಗಳನ್ನು ಮತ್ತೆ ತೊಟ್ಟುಕೊಂಡರು ಮತ್ತು ಎಂದಿನಂತೆ ಅಂಚಿನ ಸೀರೆಯನ್ನೇ ಉಟ್ಟರು. ಅವರ ವೈಧವ್ಯ ಅಂದಿಗೇ ಕೊನೆ ಗೊಂಡಿತು.

ಅಷ್ಟೇ ಅಲ್ಲ, ಸಾಮಾನ್ಯ ಮಾನವರಿಗೂ ಭಗವಂತನ ಪ್ರತ್ಯಕ್ಷ ಸಾನ್ನಿಧ್ಯದ ಅನುಭವಗಳು ದೊರೆತಿವೆ. ಅವುಗಳಲ್ಲಿ ಕೆಲವನ್ನು ನಾನು ಈಗ ತಿಳಿಸುತ್ತಿದ್ದೇನೆ. ನಾನು ನ್ಯೂಯಾರ್ಕಿನ ತ್ವರಿತ ಗತಿಯ ಜೀವನವನ್ನು ತ್ಯಜಿಸಿ ಆ ನಗರಕ್ಕಿಂತ ಹೆಚ್ಚು ಶಾಂತ ವಾಗಿದ್ದ ಬೋಸ್ಟನ್ ನಗರಕ್ಕೆ ಸ್ಥಳಾಂತರ ಮಾಡಿದೆ. ಅಲ್ಲಿ ನಾನು ಏಕಾಂತವಾಗಿ ಮತ್ತು ಮೌನವಾಗಿ ಕಾಲವನ್ನು ಕಳೆಯುತ್ತಿದ್ದೆ. ಹೀಗಿರುವಾಗ ಒಂದು ಮಧ್ಯಾಹ್ನ ನಾನು ನನ್ನ ಕೋಣೆಯೊಳಗೆ ಕುಳಿತುಕೊಂಡು ಏನೂ ಗೊತ್ತುಗುರಿ ಇಲ್ಲದ ಇಂತಹ ನನ್ನ ಜೀವನವನ್ನು ಕುರಿತು ದುಃಖಿತಳಾಗಿ ಚಿಂತಿಸುತ್ತಿದ್ದೆ. ಆಗ ಇದ್ದ ಕ್ಕಿದ್ದಂತೆ ನನ್ನ ಮುಂದೆ ಇಬ್ಬರು ವ್ಯಕ್ತಿಗಳು ಪ್ರತ್ಯಕ್ಷರಾಗಿ ಬಂದು ನಿಂತರು. ಅವರಲ್ಲಿ ಒಬ್ಬರ ವದನಾರವಿಂದವು ದಿವ್ಯ ಮುಗುಳು ನಗೆಯನ್ನು ಬೀರುತ್ತಿತ್ತು ಮತ್ತು ಅದರ ಪ್ರಭೆ ಅವರ ಶರೀರ ವನ್ನೆಲ್ಲಾ ಬೆಳಗುತ್ತಿರುವಂತೆ ತೋರುತ್ತಿತ್ತು. ಅವರು ಪ್ರಶಾಂತ ಮೃದು ಮಧುರ ದನಿಯಲ್ಲಿ ನನ್ನನ್ನು ಸಂತೈಸುತ್ತಾ, ''ಚಿಂತಿಸ ಬೇಡ! ನೀನು ನನ್ನ ಕೆಲಸವನ್ನು ಮಾಡಬೇಕಾಗಿದೆ!'' ಎಂದು ತಿಳಿಸಿದರು. ಅನಂತರ ಅವರಿಬ್ಬರೂ ಅದೃಶ್ಯರಾದರು. ಈ ದರ್ಶನ ಮುಗಿದ ನಂತರವೂ ಆ ಆನಂದಲಹರಿಯು ಎಡಬಿಡದೆ ಬಹು ಕಾಲ ನನ್ನನ್ನು ಆವರಿಸಿಕೊಂಡಿತ್ತು.

ಮೇಲಿನ ಘಟನೆ ನಡೆದ ಸ್ವಲ್ಪ ಕಾಲದ ನಂತರದ ವಸಂತ ಋತುವಿನ ಆದಿಭಾಗದಲ್ಲಿ ಮೇಲಿನ ಘಟನೆ ನಡೆದ ಸ್ವಲ್ಪ ಕಾಲದ ನಂತರ ನಾನು ಮತ್ತೆ ನ್ಯೂಯಾರ್ಕಿಗೆ ಹಿಂದಿರುಗಿದೆ. ಅಲ್ಲಿನ ವೇದಾಂತ ಸಂಘದ ಸದಸ್ಯೆಯಾಗಿ ಸೇರಿಕೊಂಡೆ. ಅಲ್ಲಿ ನನ್ನನ್ನು ಆ ಕೇಂದ್ರದ ಪ್ರಕಟನಾ ಶಾಖೆಯ ಮೇಲ್ವಿಚಾರಕಳನ್ನಾಗಿ ನಿಯ ಮಿಸಿದರು. ಆ ಸಮಯದಲ್ಲಿ ಸಂಘದಿಂದ ಅನೇಕ ಪುಸ್ತಕಗಳು ಒಂದಾದ ಮೇಲೆ ಒಂದರಂತೆ ಪ್ರಕಟವಾಗುತ್ತಿದ್ದವು. ನನ್ನ ಸಮಯವೆಲ್ಲಾ ಆ ಕೆಲಸದಲ್ಲಿಯೇ ಕಳೆದುಹೋಗುತಿತ್ತು. ಈ ಕೆಲಸದ ಸಂದರ್ಭದಲ್ಲಿ ನಾನು ಸಂಘದ ಅಧ್ಯಕ್ಷರನ್ನು ಅನೇಕ ಬಾರಿ ಭೇಟಿ ಮಾಡುತ್ತಿದ್ದೆ. ಒಂದು ಮಧ್ಯಾಹ್ನ ಸಂಘದ ಹೊಸ ಪ್ರಕಟನೆಯೊಂದರ ವಿಷಯವಾಗಿ ನನ್ನೊಡನೆ ಚರ್ಚಿಸಲು ಅಧ್ಯಕ್ಷರು ನನ್ನನ್ನು ತಮ್ಮ ವ್ಯಾಸಂಗದ ಕೋಣೆಯೊಳಗೆ ಕರೆದರು. ನಾನು ಆ ಕೋಣೆಯೊಳಗೆ ಕಾಲು ಹಾಕಿದೊಡನೆ ನನ್ನ ದೃಷ್ಟಿ ಅಲ್ಲಿನ ಬೆಂಕಿಗೂಡಿನ ಫಲಕದ (Mantel) ಮೇಲೆ ತೂಗು ಹಾಕಿದ್ದ ಛಾಯಾಚಿತ್ರದ ಕಡೆಗೆ ಆಕರ್ಷಿಸಲ್ಪಟ್ಟಿತು.

ಒಡನೆ ನಾನು ಆಶ್ಚರ್ಯದಿಂದ ಸ್ತಬ್ಧಳಾಗಿ ಹಾಗೆಯೇ ನಿಂತು ಬಿಟ್ಟೆ; ಏಕೆಂದರೆ ನನಗೆ ಬೋಸ್ಟನ್ ನಗರದಲ್ಲಿ ದರ್ಶನ ಭಾಗ್ಯ ವನ್ನಿತ್ತ ಮಹಾಪುರುಷರು ಈ ಚಿತ್ರದಲ್ಲಿ ಕಂಗೊಳಿಸುತಿದ್ದವರೇ! ಮರುಕ್ಷಣವೇ ನಾನು ಬೆಂಕಿಗೂಡನ್ನು ದಾಟಿ ಅಧ್ಯಕ್ಷರನ್ನು ಥಟ್ಟನೆ, ''ಆ ಚಿತ್ರದಲ್ಲಿರುವವರು ಯಾರು?'' ಎಂದು ಪ್ರಶ್ನಿಸಿದೆ. ಅಧ್ಯಕ್ಷರು ಶಾಂತ ಗಂಭೀರ ಸ್ವರದಲ್ಲಿ, ''ಅವರೇ ನನ್ನ ಗುರುದೇವ ಶ್ರೀರಾಮ ಕೃಷ್ಣರು'' ಎಂದು ಉತ್ತರವಿತ್ತರು.

*(ಮುಂದಿನ ಸಂಚಿಕೆಗೆ)*